ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕಃ 25.02.2026
ಪಾಟೀಸವಾಲು ಪ್ರತಿವಾದಿಯರ ಪರ ಶ್ರೀ ಪಿ ಹೆಚ್ ಎ ವಕೀಲರಿಂದಃ

ಮದ್ಯಾನಪ್ಪ ಎಂದರೆ ಯಾರು ಎಂದು ನನಗೆ ಗೊತ್ತಿಲ್ಲ. ವಾದಿಗಳ ತಂದೆಯ ಹೆಸರು ಗುರುಸಿದ್ದಪ್ಪ ಇರುತ್ತದೆ. ಗುರುಸಿದ್ದಪ್ಪನಿಗೆ 3 ಜನ ಸಹೋದರರು ಇದ್ದು ಅವರೆಂದರೆ ಕರಿಸಿದ್ದಪ್ಪ , ಶರಣಪ್ಪ ಇದ್ದು ಇನ್ನೊಬ್ಬರ ಹೆಸರು ನೆನಪಿರುವುದಿಲ್ಲ. ಸದರಿ 4 ಜನ ಸಹೋದರರ ಪೈಕಿ ಗುರುಸಿದ್ದಪ್ಪ ಬೆನಕನಾಳದಲ್ಲಿ ಇದ್ದರು. ಕರಿಸಿದ್ದಪ್ಪ ಮತ್ತು ಶರಣಪ್ಪ ರವರು ಕುಷ್ಟಗಿಯಲ್ಲಿಇದ್ದರು ಮತ್ತು ಇನ್ನೊಬ್ಬರು ಎಲ್ಲಿ ಇದ್ದರು ಎಂದು ನನಗೆ ನೆನಪಿಲ್ಲ. ಗುರುಸಿದ್ದಪ್ಪರವರು ಕುಷ್ಟಗಿಯಲ್ಲಿ ಇದ್ದರೂ ಕೂಡಾ ಬೆನಕನಾಳದಲ್ಲಿ ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುರುಸಿದ್ದಪ್ಪ ಮತ್ತು ಅವರ ಸಹೋದರರು ಯಾವಾಗ ವಿಭಾಗ ಮಾಡಿಕೊಂಡರು ಎಂದು ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಗುರುಸಿದ್ದಪ್ಪ ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ಹೇಳಿ ಬರೆಸಿರುತ್ತೇನೆ. ಅವರು ಸುಮಾರು 40-50 ವರ್ಷದ ಹಿಂದೆ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿ ವಿಭಾಗದ ಮಾತುಕತೆಯು ಕುಷ್ಟಗಿಯಲ್ಲಿ ಆಗಿರುತ್ತದೆ. ಸದರಿ ಮಾತುಕತೆ ಕಾಲಕ್ಕೆ ನಾನು ಇರಲಿಲ್ಲ. ಗುರುಸಿದ್ದಪ್ಪ ಮತ್ತು ಅವರ ಸಹೋದರರ ಕುಟುಂಬಕ್ಕೆ ಬೆನಕನಾಳದಲ್ಲಿ 30-40 ಎಕರೆ , ಗಜೇಂದ್ರಗಡದಲ್ಲಿ ಒಂದು ಮಳಿಗೆ , ಕುಷ್ಟಗಿಯಲ್ಲಿ 20 ಎಕರೆ ಜಮೀನು ಇರುತ್ತದೆ. ಸದರಿ ವಿಭಾಗದಲ್ಲಿ ಗುರುಸಿದ್ದಪ್ಪರವರ ಭಾಗಕ್ಕೆ ಸರ್ವೆ ನಂ. 370 ರಲ್ಲಿ 5 ಚಿಲ್ಲರೆ ಎಕರೆ , ಗಜೇಂದ್ರಗಡದಲ್ಲಿರುವ ಮಳಿಗೆ ಬಂದಿರುತ್ತದೆ. ಉಳಿದ ಸಹೋದರರಿಗೆ ಎಷ್ಟು ಆಸ್ತಿಗಳು ಬಂದಿವೆ ಎಂದು ನನಗೆ ಗೊತ್ತಿಲ್ಲ. ನನಗೆ

ಗುರುಸಿದ್ದಪ್ಪರವರ ಕುಟುಂಬಕ್ಕೆ ಯಾವ ಆಸ್ತಿಗಳು ಇದ್ದವು ಮತ್ತು ಯಾರಿಗೆ ಎಷ್ಟು ಆಸ್ತಿ ಬಂದಿವೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದಂತೆ ಗುರುಸಿದ್ದಪ್ಪರವರ ಪಾಲಿಗೆ ದಾವಾ ಆಸ್ತಿಗಳು ಬಂದಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕೆ ನಾನೇ ಮಾಹಿತಿ ನೀಡಿರುತ್ತೇನೆ. ಸದರಿ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಸ್ವತ್ತು ಕುಷ್ಟಗಿ ಗ್ರಾಮದಲ್ಲಿರುತ್ತದೆ. ಸದರಿ ಜಮೀನು ಕುಷ್ಟಗಿಯಿಂದ ಟೆಂಗುಂಟಿಗೆ ಹೋಗುವ ರಸ್ತೆಯಲ್ಲಿ ಬರುತ್ತದೆ. ಸದರಿ ಜಮೀನಿನ ಚಕ್ಕಬಂದಿ ನನಗೆ ಗೊತ್ತಿಲ್ಲ. ಕುಷ್ಟಗಿಯಿಂದ ಬೆನಕನಾಳ ಗ್ರಾಮ 18 ಕಿ.ಮಿ ಅಂತರ ಇರುತ್ತದೆ. ದಾವಾ ಸ್ವತ್ತಿನ ಪಹಣಿಯನ್ನು ನಾನು ನೋಡಿರುತ್ತೇನೆ. ದಾವಾ ಜಮೀನು 5 ಎಕರೆ ಚಿಲ್ಲರೆ ಇರುತ್ತದೆ. ಸದರಿ ದಾವಾ ಜಮೀನಿನ ಪಹಣಿ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ನೆನಪಿಲ್ಲ. ಗುರುಸಿದ್ದಪ್ಪ ಮತ್ತು ಅವರ ಮಕ್ಕಳು ದಾವಾ ಸ್ವತ್ತನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ದಾವಾ ಜಮೀನು ಕರಿಬಸಪ್ಪನ ಭಾಗಕ್ಕೆ ಬಂದಿದ್ದು ಅವರ ಮಕ್ಕಳೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತಿನಲ್ಲಿ ನಾನು ಯಾವತ್ತೂ ಕೃಷಿ ಕೆಲಸಗಳಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಎತ್ತುಗಳು ಇದ್ದವು. ನಮ್ಮ ಮನೆಯಲ್ಲಿ ಸುಮಾರು 4 ವರ್ಷಗಳಿಂದ ಕೃಷಿ ಕೆಲಸ ಮಾಡುತ್ತಿಲ್ಲ. ನಾನು ಸುಮಾರು 35 ವರ್ಷಗಳಿಂದ ಸದರಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದೇನೆ. ದಾವಾ ಸ್ವತ್ತು ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲದೆ ಇದ್ದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಕೃಷಿ ಕೆಲಸ ಮಾಡಿಲ್ಲ ನಮ್ಮ ಮನೆಯಲ್ಲಿ ಯಾವತ್ತೂ ಕೃಷಿ ಪರಿಕರಗಳು ಇರಲಿಲ್ಲ ಎಂದರೆ ಸರಿಯಲ್ಲ. ಬೆನಕನಾಳದಿಂದ ಕುಷ್ಟಗಿಗೆ ನಾನು ಬಂದು ಯಾವತ್ತೂ

ಕೃಷಿ ಕೆಲಸ ಮಾಡಿಲ್ಲಎಂದರೆ ಸರಿಯಲ್ಲ. ವಾದಿಗಳ ಮಾತುಕೇಳಿ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದುಡ್ಡು ಕೊಟ್ಟವರ ಪರವಾಗಿ ನ್ಯಾಯಾಲಯದಲ್ಲಿ ಬಂದು ಸುಳ್ಳು ಸಾಕ್ಷಿ ನುಡಿಯುವ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಕುಷ್ಟಗಿ